# ಉಪ ತಹಶೀಲ್ದಾರರು, ನಾಡ ಕಾರ್ಯಾಲಯ, ಹಿರೇಹಡಗಲಿಯಲ್ಲಿ

| ಅರ್ಜಿದಾರರು | ತಕರಾರುದಾರರು |
|---|---|
| ಹೊಸಬಾವಿ ಹುಸೇನ್‌ಸಾಬ್ ತಂದೆ<br>ಲೇಟ್ ಪೀರ್‌ಸಾಬ್,<br>ಹಿರೇಹಡಗಲಿ ಗ್ರಾಮ, ಹಡಗಲಿ ತಾ.<br>{ಶ್ರೀ ಅಶೋಕ ಮ.ಮಡಿವಾಳರ, ವಕೀಲರು, ಲಕ್ಷ್ಮೇಶ್ವರ} | ಎಂ.ಬುಡೇನ್ ಸಾಬ್ ತಂದೆ ನನ್ನೆಸಾಬ್,<br>ಹಿರೇಹಡಗಲಿ ಗ್ರಾಮ, ಹಡಗಲಿ ತಾ.<br>{ಶ್ರೀ ಶ್ರೀಪ್ರಕಾಶ, ವಕೀಲರು, ಹಡಗಲಿ} |

ವಿವಾದಿತ ಜಮೀನಿನ ವಿವರ:–

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಹಿರೇಹಡಗಲಿ | 328/ಎಫ್ | 0–18 | ಖುಷ್ಕಿ |

*****

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಹಿರೇಹಡಗಲಿ ಗ್ರಾಮದ ಮೇಲ್ಕಂಡ ವಿವಾದಿತ ಜಮೀನುಗಳಿಗೆ ಸಂಬಂಧಿಸಿದಂತೆ, ಹಿರೇಹಡಗಲಿ ಗ್ರಾಮದ ನಿವಾಸಿಯಾದ ಹೊಸಬಾವಿ ಹುಸೇನ್‌ಸಾಬ್ ತಂದೆ ಲೇಟ್ ಪೀರ್‌ಸಾಬ್ ರವರು ಪೌತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ಅರ್ಜಿಯನ್ನು ದಿ:22-04-2013 ರಂದು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ–21 ರ ನೋಟೀಸು ದಿನಾಂಕ 06–05–2013 ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿ:30–05–2013 ರಂದು ಹಿರೇಹಡಗಲಿ ಗ್ರಾಮದ ಮುಜಾವರ ಬುಡೆನ್‌ಸಾಹೇಬ್ ತಂದೆ ದಿ// ಮುಜಾವರ ನನ್ನು ಸಾಹೇಬ್ ರವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ ಎಂ.ಆರ್.ನಂ.56/2012–13 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವರದಿ ಮಾಡಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿನಾಂಕ 27–06–2013 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

ಪ್ರಕರಣದ ವಿಚಾರಣೆಗೆ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿ ವಂಶವೃಕ್ಷ, ಕೈ ಬರಹ ಪಹಣಿ ಪ್ರತಿಗಳು, ನಮೂನೆ–16 ರ ಪ್ರತಿ, ಇ.ಸಿ.ಪ್ರತಿ, ದಿ:7–12–1943ರ ದಸಾವೇಜು ಪ್ರತಿಗಳನ್ನು ಸಲ್ಲಿಸುತ್ತಾ, ಕೈ ಬರಹ ಪಹಣಿ ಪತ್ರಿಕೆಯಲ್ಲಿ ಹೊಸಬಾವಿ ಪೀರ್‌ಸಾಬ್ ಎಂಬುವವರ ಹೆಸರು ಹೇಗೆ ಬಂದಿತು? ಮತ್ತು ಅವರ ಹೆಸರು ಕಂಪ್ಯೂಟರ್ ಪಹಣಿಯಲ್ಲಿ ಹಾಗೆ ಮುಂದುವರೆದಿದ್ದು, ಸದರಿಯವರ ಹಕ್ಕಿನ ಬಗ್ಗೆ ತಕರಾರು ಸಲ್ಲಿಸಿರುವುದಾಗಿ ತಿಳಿಸಿದರು. ಅರ್ಜಿದಾರರು ಯಾವುದೇ ದಾಖಲೆಗಳನ್ನಾಗಲೀ ಅಥವಾ ಹೇಳಿಕೆಯನ್ನಾಗಲೀ ಸಲ್ಲಿಸಿರುವುದಿಲ್ಲ.

ಸದರಿ ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಸಲ್ಲಿಸಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು. ಅರ್ಜಿದಾರರು ಸಲ್ಲಸಿದ ದಾಖಲೆಗಳಲ್ಲಿ ಸ.ನಂ.328/ಎಫ್ ವಿ:0–46 ಪೈಕಿ 0–18 ಎಕ್ರೆ ಹೊಸಬಾವಿ ಪೀರ್‌ಸಾಬ್ ಹೆಸರಿಗೆ ಹಾಲಿ ಪಹಣಿ ಇರುತ್ತದೆ. ಹೊಸಬಾವಿ ಪೀರ್‌ಸಾಬ್ ಇವರು ದಿ:4–3–2012 ರಂದು ಮರಣ ಹೊಂದಿದ ಬಗ್ಗೆ ಮರಣ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸಿರುತ್ತಾರೆ. ನೋಂದಾಯಿತ ದಸ್ತಾವೇಜು ಸಂಖ್ಯೆ 2338/1943 ದಿ:4–12–1943 ರಂದು ಲಿಂಗಪ್ಪ ತಂದೆ ಧರ್ಮಪ್ಪನು ಹುಸೇನ್ ಸಾಬ್ ತಂದೆ ಮುಜಾವರ ಮಾಬುಸಾಬ್ ಇವರಿಗೆ ಮಾರಾಟ ಮಾಡಿರುತ್ತಾರೆ. 1968–69 ರಿಂದ 1990–91 ವರೆಗಿನ ಕೈ ಬರಹ ಪಹಣಿ ಕಾಲಂ 9 ರಲ್ಲಿ ಮುಜಾವರ ಹುಸೇನ್ ಸಾಬ್ ತಂದೆ ಬುಡೇನ್‌ಸಾಬ್ ಇವರ ಹೆಸರು ನಮೂದಾಗಿರುತ್ತದೆ. 1996–97 ರಿಂದ 1998–99 ರವರೆಗೆ ಕೈ ಬರಹ ಪಹಣಿಯಲ್ಲಿ ಕಾಲಂ 9 ರಲ್ಲಿ ಮುಜಾವರ ಹುಸೇನ್ ಸಾಬ್ ತಂದೆ ಬುಡೇನ್‌ಸಾಬ್ ಮತ್ತು ಹೊಸಭಾವಿ ಪೀರ್‌ಸಾಬ್ ಇವರ ಹೆಸರು ನಮೂದು ಇರುತ್ತದೆ. ಕಾಲಂ ನಂ.10 ರಲ್ಲಿ ಯಾವುದೇ ಮ್ಯುಟೇಷನ್ ಸಂಖ್ಯೆ ನಮೂದು ಆಗಿರುವುದಿಲ್ಲ. ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ಉಭಯರು ಸಿವಿಲ್ ನ್ಯಾಯಲಯದಲ್ಲಿ ತಮ್ಮ ಹಕ್ಕನ್ನು ಸಾಭೀತುಪಡಿಸಿಕೊಳ್ಳಲು ಸೂಚಿಸುತ್ತಾ ಈ ಕೆಳಕಂಡಂತೆ ಆದೇಶ.

ಸಂ/ಕರ/ಪಹಣಿ/ವಿವಾದ/15/2013–14 ದಿನಾಂಕ:17–10–2016.

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಎಂ.ಆರ್.ನಂ.56/2012–13 ರ ಪ್ರಕರಣದಲ್ಲಿ ಉಭಯ ಪಕ್ಷಕಾರರು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಸ್ಥಿರಿಕರಿಸಿಕೊಳ್ಳಲು ಸೂಚಿಸುತ್ತಾ, ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶಿಸಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಹಿರೇಹಡಗಲಿ

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ
ಹಿರೇಹಡಗಲಿ

ಪ್ರತಿಯನ್ನು

1. ವಾದಿ ಮತ್ತು ಪ್ರತಿವಾದಿಗಳಿಗೆ
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಶುದ್ಧಪ್ರತಿ.